ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಶ್ರೀರಂಗಪಟ್ಟಣ

ಸಿಸಿಃ ನಂಃ **1112/2021**

ಪಿ.ಡಬ್ಲ್ಯೂಃ **02**

ಸಿ.ಡಬ್ಲ್ಯೂಃ **05**

| | |
|---|---|
| ಸಾಕ್ಷಿಯ ಹೆಸರು | ಶ್ರೀಕಾಂತ್ ಎಸ್ |
| ತಂದೆ/ಗಂಡನ ಹೆಸರು | ಶ್ರೀನಿವಾಸ್ ಎಂ |
| ವಯಸ್ಸು | 32 ವರ್ಷ |
| ಉದ್ಯೋಗ | ಕೆ ಇ ಬಿ ಕಂಟ್ರಾಕ್ಟರ್ |
| ವಿಳಾಸ | ಪಾಂಡವಪುರ |

ಸಾಕ್ಷಿಗೆ ದಿನಾಂಕ **06.06.2025** ರಂದು ಪ್ರಮಾಣವಚನ ನೀಡಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಸ ಸ ಅ ರವರಿಂದಃ

ಚಾ ಸಾ **1** ಗೊತ್ತು ನನ್ನ ಸ್ನೇಹಿತರು. ಚಾ ಸಾ **4** ಗೊತ್ತು. ಆರೋಪಿ ಗೊತ್ತಿಲ್ಲ.

ಸುಮಾರು **3** ವರ್ಷಗಳ ಹಿಂದೆ ಚಾ ಸಾ **1** ಮತ್ತು **4** ರವರು ಕಾರಿನಲ್ಲಿ ಹೋಗುತ್ತಿದ್ದಾಗ ಕೆ.ಎಸ್.ಆರ್.ಟಿ.ಸಿ ಬಸ್ ನಿಂದ ಅಪಘಾತಕ್ಕೊಳಗಾಗಿರುವುದಾಗಿ ತಿಳಿಸಿರುತ್ತಾರೆ. ಅಪಘಾತವನ್ನು ನಾನು ಖುದ್ದು ನೋಡಿಲ್ಲ. ಈ ಬಗ್ಗೆ ಪೋಲಿಸರು ನನ್ನನ್ನು ಯಾವುದೇ ವಿಚಾರಣೆ ಮಾಡಿಲ್ಲ, ಹೇಳಿಕೆ ನೀಡಿಲ್ಲ.

(ಸಾಕ್ಷಿಯನ್ನು ಮಾನ್ಯ ಸ ಸ ಅ ರವರ ಕೋರಿಕೆಯ ಮೇರೆಗೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು).

ಪಾಟೀ ಸವಾಲು ಃ ಮಾನ್ಯ ಸ ಸ ಅ ರವರಿಂದ ಃ

ದಿ. 02.04.2021 ರಂದು ನಾನು ಚಾ ಸಾ 1 ಮತ್ತು 4 ರವರು 3 ಜನ ಪಾಂಡವಪುರದಿಂದ ಮೈಸೂರಿಗೆ ಕೆಎ-11-ಎಂ-8876 ಹುಂಡೈ ಐ-20 ಕಾರನಲ್ಲಿ ಮೈಸೂರಿಗೆ ಹೋಗಿದ್ದೆವು ಎಂದರೆ ಸರಿಯಲ್ಲ. ಮೈಸೂರಿನಿಂದ ವಾಪಸ್ ಪಾಂಡವಪುರಕ್ಕೆ ಬರಲು ಅದೇ ಕಾರ್ ನಲ್ಲಿ ಸಂಜೆ ಸುಮಾರು 6.10 ರ ವೇಳೆಯಲ್ಲಿ ಶ್ರೀರಂಗಪಟ್ಟಣದ ವಿನಾಯಕ ಸ್ಟೋರ್ ಹಿಂಭಾಗ ಕೆಎ-11-ಎಫ್-0414 ಕೆ.ಎಸ್.ಆರ್.ಟಿ.ಸಿ ಬಸ್ಸನ್ನು ಅದರ ಚಾಲಕ ಅತಿವೇಗ ಹಾಗೂ ನಿರ್ಲಕ್ಷತೆಯಿಂದ ಚಾಲನೆ ಮಾಡಿಕೊಂಡು ಬಂದು ಕಾರ್ ಗೆ ಡಿಕ್ಕಿಪಡಿಸಿದರು ಎಂದರೆ

ಸರಿಯಲ್ಲ. ಇದರಿಂದ ನಮ್ಮ ಕಾರ್ ಹೆದ್ದಾರಿ ಮಧ್ಯಭಾಗದಲ್ಲಿರುವ ರಸ್ತೆ ವಿಭಜಕಕ್ಕೆ ಡಿಕ್ಕಿಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ ಚಾ ಸಾ 4 ರವರ ತಲೆಯ ಎಡಭಾಗಕ್ಕೆ ಹಾಗೂ ಚಾಸಾ 1 ರವರ ಮೂಗು ಮತ್ತು ಬಾಯಿಗೆ ಪೆಟ್ಟಾಯಿತು ಎಂದರೆ ಸರಿಯಲ್ಲ. ನನಗೂ ಸಣ್ಣ-ಪುಟ್ಟ ಪೆಟ್ಟುಗಳಾದವು ಎಂದರೆ ಸರಿಯಲ್ಲ. ಸ್ಥಳದಲ್ಲಿದ್ದ ಸ್ಥಳೀಯರು ನಮ್ಮನ್ನು ಎತ್ತಿ ಉಪಚರಿಸಿದರು ಎಂದರೆ ಸರಿಯಲ್ಲ. ಸ್ಥಳದಲ್ಲಿ ಬಸ್ ನ ಚಾಲಕನ ಹೆಸರು ಪ್ರಕಾಶ್ ಎಂದು ತಿಳಿಯಿತು ಎಂದರೆ ಸರಿಯಲ್ಲ. ಸಾರ್ವಜನಿಕರ ಸಹಾಯದಿಂದ ನಾನು ಚಾಲಕ ಪ್ರಕಾಶ್ ಇಬ್ಬರೂ ಸೇರಿ ಚಾ ಸಾ 1 ಮತ್ತು 4 ರವರನ್ನು ಆಟೋರೀಕ್ಷಾದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದೆವು ಎಂದರೆ ಸರಿಯಲ್ಲ. ಈ ಬಗ್ಗೆ ಚಾ ಸಾ 1 ರವರು ಹೋಗಿ ದೂರು ದಾಖಲಿಸಿರುವ ವಿಚಾರ ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳನ್ನು ನಾನು ದಿ.03.04.2021 ರಂದು ಪೋಲಿಸರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಸದರಿ ಹೇಳಿಕೆಯನ್ನು ಓದಿ ಹೇಳಲಾಗಿ ನಿರಾಕರಿಸಿದ ಹಿನ್ನೆಲೆಯಲ್ಲಿ ಹೇಳಿಕೆಯನ್ನು ನಿಪಿ 3 ಎಂದು ಗುರುತಿಸಲಾಯಿತು.

ಆರೋಪಿ ನನಗೆ ಗೊತ್ತಿದ್ದರೂ ಅಪಘಾತದಿಂದ ನನಗೂ ಸೇರಿದಂತೆ ಚಾ ಸಾ 1 ಮತ್ತು 4 ರವರಿಗೆ ಪೆಟ್ಟುಗಳಾಗಿದ್ದು, ನನಗೆ ನಿಪಿ 3 ರ ಎಲ್ಲಾ ಅಂಶಗಳು ಗೊತ್ತಿದ್ದರು, ಆರೋಪಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲು ಆರೋಪಿತರಪರ ವಕೀಲರಿಂದ ಇರುವುದಿಲ್ಲ.

ಮರು ವಿಚಾರಣೆ ಇಲ್ಲ:

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ